ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1796 (1544)
ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರೇವಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 24.03.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಹಿಂದುಳಿದ ವರ್ಗಗಳಿಗೆ ಕೆ.ಐ.ಎ.ಡಿ.ಬಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ನಿಂದ ಹಂಚಿಕೆ ಮಾಡಲಾಗುವ ಪ್ಲಾಟ್‌ಗಳಿಗೆ ಸಬ್ಸಿಡಿ ನೀಡುವ ಕಾರ್ಯಕ್ರಮಕ್ಕೆ ಆದೇಶ ಹೊರಡಿಸಿರುವುದು ಯಾವಾಗ;	ಸರ್ಕಾರದ ಆದೇಶ ಸಂಖ್ಯೆ ಸಿಐ 113 ಎಸ್‌ಪಿಐ 2017 ನ್ನು ದಿನಾಂಕ 28.12.2017 ರಂದು ಹೊರಡಿಸಿರುತ್ತದೆ.
ಆ	ಹಿಂದುಳಿದ ವರ್ಗಗಳಿಗೆ ಶೇಕಡ ಎಷ್ಟು ಸಬ್ಸಿಡಿಯನ್ನು ಈ ಪ್ಲಾಟ್‌ಗಳಿಗೆ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ;	ಈ ಆದೇಶದಲ್ಲಿ ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1, ಪ್ರವರ್ಗ–2ಎ ಮತ್ತು ಪ್ರವರ್ಗ–2ಬಿ) ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆ ಮಾಡಲಾಗುವ ಒಟ್ಟು ಮೊತ್ತದಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ರಿಯಾಯಿತಿಯನ್ನು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ 1 ಎಕರೆಗೆ ಹಾಗೂ ಇತರೆ ಜಿಲ್ಲೆಗಳಲ್ಲಿ 2 ಎಕರೆಗೆ ಸೀಮಿತಗೊಳಿಸಿದೆ.
ಇ	ಸರ್ಕಾರ ಆದೇಶ ಹೊರಡಿಸಿದಾಗಿನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಹಿಂದುಳಿದ ವರ್ಗಗಳ ಫಲಾನುಭವಿಗಳು ಈ ಪ್ರಯೋಜನವನ್ನು ಪಡೆದಿರುತ್ತಾರೆ, ಮತ್ತು ಎಷ್ಟು ಹಣ ಸಬ್ಸಿಡಿಯಾಗಿ ನೀಡಲಾಗಿದೆ? (ವರ್ಗವಾರು ಸಂಖ್ಯೆ ನೀಡುವುದು)	ಕೆ.ಐ.ಎ.ಡಿ.ಬಿ. ನಿಂದ ದಿನಾಂಕ 01.04.2017 ರಿಂದ 31.12.2019ರ ವರೆಗೆ ಹಿಂದುಳಿದ ವರ್ಗಗಳ 83 ಫಲಾನುಭವಿಗಳು ಈ ಯೋಜನೆಯಡಿ ಪ್ರಯೋಜನ ಪಡೆದಿರುತ್ತಾರೆ. ಈ 83 ಫಲಾನುಭವಿಗಳಿಗೆ ಒಟ್ಟು ರೂ.16.94 ಕೋಟಿಗಳ ಸಬ್ಸಿಡಿಯನ್ನು ನೀಡಲಾಗಿದೆ. ವರ್ಗವಾರು ಫಲಾನುಭವಿಗಳ ಸಂಖ್ಯೆಯನ್ನು ಈ ಕೆಳಕಂಡಂತೆ ನೀಡಲಾಗಿದೆ. ಕ್ರ.ಸಂ. / ಹಿಂದುಳಿದ ವರ್ಗಗಳು / ಫಲಾನುಭವಿಗಳ ಸಂಖ್ಯೆ 1 / ಪ್ರವರ್ಗ–1 / 12 2 / ಪ್ರವರ್ಗ–2ಎ / 52 3 / ಪ್ರವರ್ಗ–2ಬಿ / 19 ಒಟ್ಟು / 83 ಇಲ್ಲಿಯವರೆಗೆ ಕೆ.ಎಸ್.ಎಸ್.ಐ.ಡಿ.ಸಿ. ನಿಂದ ಯಾವುದೇ ಫಲಾನುಭವಿಗಳಿಗೆ ಈ ಪ್ರಯೋಜನ ಪಡೆದಿರುವುದಿಲ್ಲ.

ಸಿಐ 90 ಎಸ್‌ಪಿಐ 2020(ಇ)

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು